Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ಪಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 30 ಸಂಚಿಕೆ 251 | ಸೋಮವಾರ 2—6—47 | ಬಿಡಿ ಪ್ರತಿ 6 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ — ಆರ್ಥಿಕ ಸ್ಥಿತಿ ನಟ್ಟಗಿರುವದಿಲ್ಲ. ನಿರುದ್ಯೋಗತನ. ವ್ಯವಹಾರದಲ್ಲಿ ಕಷ್ಟ.

ವೃಷಭ — ಮಿಶ್ರರಿಂದ ಲಾಭವಿದೆ. ವ್ಯವಹಾರದಲ್ಲಿ ಸುಖ ಸಂತೋಷಗಳು.

ಮಿಥುನ — ಚಟುವಟಿಕೆಯಿಂದಿರಲು ಕೆಲಸ ಮಾಡಿದಲ್ಲಿ ಹೆಚ್ಚು ಅನುಕೂಲವುಂಟು. ಧನಲಾಭವಾಗುವುದು. ವ್ಯವಹಾರದಲ್ಲಿ ಮಿಶ್ರ ಫಲವು ಕಾಣಬರುವದು.

ಕಟಕ — ಮನಸ್ಸು ಪ್ರಸನ್ನವಾಗುವ ಪ್ರಸಂಗಗಳು ಒದಗುತ್ತಿರುತ್ತವೆ. ವ್ಯವಹಾರದಲ್ಲಿ ಅನುಕೂಲ.

ಸಿಂಹ — ಚರ್ಮ ವ್ಯಾಧಿಗಳ ಭಯ. ಅಧಿಕಾರಿಗಳ ದುಷ್ಟಿತಿ ದುಂದು ವೆಚ್ಚ.

ಕನ್ಯ — ಸ್ಪರ್ಧೆಯವು ಹೆಚ್ಚಿದಲ್ಲಿ ಅಧಿಕ ಫಲ ಪ್ರಾಪ್ತಿಯುಂಟು. ವ್ಯಾಪಾರದಲ್ಲಿ ಹೆಚ್ಚು ಲಾಭ. ವ್ಯವಹಾರದಲ್ಲಿ ಜಯ.

ತುಲ—ಹಣದ ಶಾಸಕ್ತಿಯವು ಸ್ವಷ್ಟದಲ್ಲಿಯೂ ಇರುವುದಿಲ್ಲ. ಎಲ್ಲಾ ಕಾರ್ಯಗಳಲ್ಲಿಯೂ ವಿಜಯ ಪ್ರಾಪ್ತಿ. ಉದ್ಯೋಗದಲ್ಲಿ ಶತ್ರುಗಳಿಗೆ ಅವನತಿ.

ವೃಶ್ಚಿಕ — ಆರೋಗ್ಯ ಉತ್ತಮ. ಆರ್ಥಿಕ ಪ್ರಗತಿ. ಪ್ರಯಾಣದಿಂದ ಲಾಭ.

ಧನಸ್ಸು — ವ್ಯವಹಾರದಲ್ಲಿ ಅಸಜಯ. ಸಾಲಗಾರರ ಶಗತಾವೆ ಮನಸ್ಸಿಗೆ ಅಲಸ್ಯ, ಶರೀರ ಅನಾರೋಗ್ಯ.

ಮಕರ — ವ್ಯವಹಾರದಲ್ಲಿ ಜಯ. ಮನಸ್ಸಿಗೆ ಉಲ್ಲಾಸ, ಆರೋಗ್ಯ ಉತ್ತಮ. ಶುಭ ಕಾರ್ಯಗಳಲ್ಲಿ ಮಿತ್ರರಲ್ಲಿ ಸಹಕಾರ.

ಕುಂಭ — ಶತ್ರುಗಳಿಗೆ ನಾಶ, ಲಾಟರಿಯಿಂದ ಧನಲಾಭ. ಸನ್ಮಾನದಲ್ಲಿ ಮಾನ್ಯತೆ.

ಮೀನ — ಧನಲಾಭ ಮಾರ್ಗಗಳು ತಾವಾಗಿಯೇ ನಿಮ್ಮನ್ನು ಆಶ್ರಯಿಸುವ ಶಕ್ಯವೆ. ವ್ಯವಹಾರದಲ್ಲಿ ಲಾಭ. ನಿರುದ್ಯೋಗಸ್ಥರಿಗೂ ಅನುಕೂಲ.

— —

ಪಾಕಿಲಿಸ್ತೈನ್ — ಪಾಕಿಲಿಸ್ತೈನ್ ಸಮಸ್ಯೆಯಲ್ಲಿ ಬ್ರಿಟಿಷ್ ಮತ್ತು ಅಮೇರಿಕಾಗಳು ಅಂಬ್ಯುಯೆಂಸ್ ಕೈ ಬಿಟ್ಟರೆ, ಶಾಪ್ ರಜ್ಯಾ ಹೊತೆ ಸೇರುವುದಾಗಿ ಪೆದರಿಸುತ್ತಿದ್ದಾರೆ.

ಬಡ್ಜೆಟ್ ಅಧಿವೇಶನದ ಭರಾಟೆ !!

ಈ ಬಾರಿಯ ಪ್ರಾ॥ ಪ್ರ॥ ಸಭೆ ಐತಿಹ್ಯ !!!

["ಕಂಠಿ" ಕಡತದಿಂದ]

* ಕೇಂದ್ರ ಸರ್ಕಾರದಲ್ಲಿದ್ದ ಸಂ॥ ಅರ್ಕಾಟ್ ನೊದಲಿಯಾರರು ಮೈಸೂರು ದಿವಾನದಿಂದಿಗೆ ಬಂದ ಮೇಲೆ ಇದೀಗ ಕೇಂದ್ರ ಶಾಸನ ಸಭೆ ಕ್ರಮದಂತೆ ಇಲ್ಲಿನ ಪ್ರಾ॥ ಪ್ರ॥ ಸಭಾ ನಾನಾ ಪಕ್ಷಗಳನ್ನು ಪತ್ತೆ ಹೆಚ್ಚಿ ಆಯಾ ಪಕ್ಷನಾಮಧೇಯಗಳ ಬುಡದಲ್ಲಿ ಆಯಾ ಸದಸ್ಯರ ಹೆಸರುಗಳನ್ನು ಅಚ್ಚು ಹಾಕಿ ಜೊತೆಗೆ ಸಭಾಂಗಣ, ಸ್ಥಳ ವ್ಯವಸ್ಥೆ ಅದಕ್ಕನುಗುಣವಾಗಿ ಪಕ್ಷ ಮತ್ತು ಸಂಖ್ಯಾ ವಿಂಗಡಣೆ ಇವುಗಳನ್ನು ಚಿತ್ರರೂಪವಲ್ಲಿ ಅಚ್ಚು ಹಾಕಿ ದೊಡ್ಡ ನ್ಯೂಸ್ ಪೊಂದನ್ನು ಹೊರ ಗೆಡಹಿದ್ದಾರೆ !!!

* ಮುಂದಿನ ಸಾಲಿನಲ್ಲಿ ಖಾಯಂ ಸ್ಥಾನ ಪಡೆದಿದ್ದ ಠಾವ್ ಬಹದ್ದೂರ್ ರಾಮಸ್ವಾಮಿ, ಎಫ್. ಸಿ. ಡಿ. ಆರಸ್ ಇವರುಗಳು ಹಿಂದಿನ ಸಾಲಿನಲ್ಲಿ ಕೂರುವಂತಾಗಿದೆ ! !

* ಮುಲ್ಕಾರೆಡ್ಡಿಗಳಿಗೆ ಮುಂಪೀಠ ಮುಡುಸಾಯಿತು !

* ಗಂಭೀರವಾಗಿ ಗುಡಗಬಲ್ಲ ಗುಪ್ಪರಿಗೇ ನಾಯಕ ಪಟ್ಟ ಧಕ್ಕಿತು !

* ಕೋಡಂ ಕಾಟ ! ! * ಸಭಾ ಪರಿತ್ಯಾಗಗಳ ಸಂಕಟ !

ಭರಾಟೆ ಬಿಸಿ ಬಲವಾಗಿದೆ ! ಇನ್ನೂ ಏನೇನೋ ಕಾದು ನೋಡೋಣ.

ವೃತ್ತಾಂತ ಸಂಗ್ರಹ

ಮಧುರಾಂತ ಮೆ 28 — ಸೆಲ್ಲೂರಿನಲ್ಲಿ ಅವಿ ದ್ರಾವಿಡ ಜನರ ಎರಡು ಗುಂಪುಗಳ ಹೊಡೆದಾಟವಾದ್ದರಿಂದ ಪೋಲೀಸರು ಟೇರ್ ಗ್ಯಾಸನ್ನು ಉಪಯೋಗಿಸಿದರು.

ವಾಷಿಂಗ್‌ಟನ್ ಮೆ 29 — ಗ್ರೀಸಿನ ಸಹಾಯಕ್ಕಾಗಿ ಜಾರ್ಜ ಮಾರ್ಷಲ ರಿಗೆ 10 ಕೋಟಿ ಡಾಲರ್ ಚಕ್ಕು ಕೊಡಲಾಯಿತು.

ಲಂಡನ್ ಡೇಲಿ ಹೆರಾಲ್ಡ್ ಪತ್ರಿಕೆಯಲ್ಲಿ ಪೀಟರ್ ಸ್ಟರ್ಲ್ ಬರ್ಗರವರು ಬರೆದಿರುವ ಒಂದು ಲೇಖನದಲ್ಲಿ ವರ್ಣದ್ವೇಶವನ್ನು ಕಾಲೊನಿಗಳಲ್ಲೂ ಬ್ರಿಟನ್ನಿನಲ್ಲೂ ಒಂದು ಕ್ರಿಮಿನಲ್ ಶಕ್ಸೀದೆಂದು ಮಾಡಬೇಕೆಂದು ತಿಳಿಸಿದ್ದಾರೆ

ಭಾರತದಿಂದ ಸಿಲೋನಿಗೆ 4 ಸಾವಿರ ಟನ್ ಅಕ್ಕಿ

ಕೊಲಂಬೊ ಜೂ 1 — ಅಗ್ನೇಯ ಏಷ್ಯಾ ಪೂಲಿನಿಂದ ಭಾರತವು ತನ್ನ ಅಕ್ಕಿ ಪೈಕಿ 4 ಸಾವಿರ ಟನ್ನಿನಷ್ಟನ್ನು ಸಿಲೋನಿಗೆ ಜೂಲೈ ತಿಂಗಳಲ್ಲಿ ಸಾಲವಾಗಿ ಕೊಟ್ಟಿದ್ದ ಜುಲೈ ಕಡೆವಳಗೆ ವಾಪಸ್ ಪಡೆಯುವುದೆಂದು ಹೇಳಲಾಗಿದೆ.

ಮಾಂಟ್ರೀಲಿನ ಹೊಸ ಪ್ಯಾರ್ಕ್ ನೋಡಿ ಅಲ್ಲಿಯ ನೆಕ್ ಟೈಗಳಿಗೆ ಲ್ಲಾ ಬತ್ತಲೆ ಸ್ತ್ರೀಯರ ಚಿತ್ರಗಳು ಹಾಕಲವಾಗಿವೆಯಂತೆ.

ಬ್ರಿಟನ್ನಿನ ನಾರ್ಥವಿಚ್ ಪಟ್ಟಣವು ಕೆಮ್ಮೆರು ಕಾಂಟಿಯು ಉಪ್ಪಿನ ಪಟ್ಟಣದ ಕೇಂದ್ರವು. ಈ ಪಟ್ಟಣವು ವರ್ಷಂಪ್ರತಿ 7 ಅಂಗುಲ ಕೆಳಕ್ಕೆ ಇಳಿಯುತ್ತಾ ಹೊಗುತ್ತಿದೆಯಂತೆ.

ಪ್ರ. ಪ್ರ. ಸಭೆ ಮೇಲೆ ಸೌದೆ ಬಿದ್ದಲು ಅಭಾವದ ನಿಲುವಳಿ ಸೂಚನೆ

ವಿದ್ಯಾ ಮಂತ್ರಿಗಳೂ ದಿವಾನ — ಇತ್ಯಾದಿ ಭಾರ್ಯರೂ ಆದ ಶ್ರೀ ಮಾನ್ ಕಾರ್ಯಕರವು ಅಧ್ಯಕ್ಷತೆಯಲ್ಲಿ ಈ ದಿವಸ 12 ಗಂಟೆಗೆ ಸರಿಯಾಗಿ ಪ್ರಜಾ ಪ್ರತಿನಿಧಿ ಸಭೆ ಪ್ರಾರಂಭವಾಯಿತು.

ಸೂರ್ಪು ತಾಲ್ಲೂಕಿನ ಶ್ರೀ ಮಲ್ಲಪ್ಪಗೌಡರು ಸೂರಂಬ ತಾಲ್ಲೂಕು ಕೆರೆಹಳ್ಳಿ ಹತ್ತಿರ ವರದಾ ನದಿಗೆ ಸೇತುವೆ ಕಟ್ಟುವ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಸರ್ಕಾರದ ಉತ್ತರವಾಯಿತು.

ಉಪ ಪ್ರಶ್ನೆಯೊಂದಕ್ಕೆ ಕಾಮಗಾರಿ ಮಂತ್ರಿ ಶ್ರೀ ಎಲ್ ಸಿದ್ದಪ್ಪನವರು ಉತ್ತರ ಕೊಡುತ್ತಾ ಸೇತುವೆ ಕಟ್ಟುವದನ್ನು ಮುಂದಿನ ವರ್ಷದಿಂದ ಆರಂಭಿಸುತ್ತೇವೆ ಎಂದರು

ಹಕ್ಕು ಭಾಧ್ಯತಾ ನಿರ್ಣಯ *

ಮುಸ್ಲಿಂ ಲೀಗಿನ ನಾಯಕರಾದ ಶ್ರೀ ಎ. ಜಿ ಖಲೀಲ್, ನಾವು ನಿನ್ನೆಯ ದಿವಸ ಸಭೆಯನ್ನು ಪ್ರವೇಶಿಸದೆ ಇದ್ದುದನ್ನು ಕುರಿತು. ಸಭೆಯ ಕಾರ್ಯಕಲಾಪಗಳಿಗೆ ಜಿತಂಕಕಂದೊಡ್ಡುತ್ತಿದ್ದಾರೆ. ಅಲ್ಪ ಸಂಖ್ಯಾತರಿಗೆ ರಕ್ಷಣೆಯನ್ನು ಕೊಡಬೇಕು ಎಂದು ತಮ್ಮಲ್ಲಿ ಕೋರಿದ್ದಾರೆ. ಪದೇ ಪದೇ ' ಪಾಯಿಂಟ್ ಆಫ್ ಆರ್ಡರ್ ' ಎತ್ತುವ ಶ್ರೀ ಎಫ್ ಸಿ ದೇವರಾಜೇ ಅರಿಸಿನಪರೂ ಆರೋಪ ಮಾಡಿದ್ದಾರೆ. ಹಾಜರಾತಿ ದಾಖಲೆಯನ್ನು ತನ್ನಿ ಆಗ ಎಲ್ಲಾ ಸದಸ್ಯರುಗಳೂ ಬರುತ್ತಾರೆ ಎಂದು ಮತ್ತೊಬ್ಬ ಸದಸ್ಯರು ಹೇಳಿ ಕೇವಲ ರೂ ನಾಯಿಗಳಿಗಾಗಿ ನಾವು ಬರುತ್ತೇವೆ. ಎಂಬ ಅರ್ಥ ಬರುವಂತೆ ಹೇಳಿದ್ದಾರೆ. ನಾವು ಈ ಸಭೆಯಲ್ಲಿ ಭಾಗವಹಿಸುವುದು ಜನ ಸೇವೆಗಾಗಿ. ನಮ್ಮ ಹಕ್ಕು ಭಾಧ್ಯತೆಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಅದುದರಿಂದ ಈ ವಿಷಯಗಳೆಲ್ಲವನ್ನೂ ಅಧಿಕೃತ ದಾಖಲೆಯಲ್ಲಿ ಸೇರಿಸಬೇಡಿ!—

ಎಂದು ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಬಿ ಎಸ್ ಗುಪ್ತರು ಹಕ್ಕುಭಾಧ್ಯತಾ ನಿರ್ಣಯವನ್ನು ಸಭೆಯ ಮುಂದೆ ಇಟ್ಟು ' ಜನವಾಣಿ ' ಪತ್ರಿಕೆಯಲ್ಲಿ ಈ ಬಗ್ಗೆ ಪ್ರಕಟವಾದ ವರದಿಯನ್ನು ಓದಲಿಚ್ಚಿಸುತ್ತೇನೆ ಎಂದು ಹೇಳಿದರು.

ಶ್ರೀ ಎಸ್. ಶ್ರೀನಿವಾಸನ್ ಮೂರ್ತಿಗಳು ಪಾಯಿಂಟ್ ಆಫ್ ಆರ್ಡರಿನ್ನೂ, ಶ್ರೀ ದೇವರಾಜೇ ಅರಸುರವರು ಅಧ್ಯೇಪಣೆಯನ್ನೂ ಎತ್ತಿದರು. ಶ್ರೀ ಗುಪ್ತರು ತಮ್ಮ ಆರೋಪವನ್ನು ವಾಪಸ್ ಪಡೆದರು.

ಈ ಹಕ್ಕು ಬಾಧ್ಯತಾ ನಿರ್ಣಯದ ಮೇಲೆ ಅಮೇಲೆ ತೀರ್ಮಾನಿಸಿಕೊಡುವುದಾಗಿ ಅಧ್ಯಕ್ಷರು ತಿಳಿಸಿದರು.

ಮಧ್ಯಾಹ್ನ 4 ಗಂಟೆಗೆ ಬೆಂಗಳೂರು ನಗರದಲ್ಲಿ ಕಾಂಟಾಗಿರುವ ಸೆದೆ ಸುತ್ತು ಇದ್ದಲು ಅಭಾವದ ಬಗ್ಗೆ ನಿಲುವಳಿ ಸೂಚನೆ ಮೇರೆ ಚರ್ಚೆ ಪ್ರಾರಂಭವಾಯಿತು.

ವರ್ತಮಾನ ಸಂಗ್ರಹ

ಲಂಡನ್ ಮೇ 27 — ಮಂತ್ರಿ ಮಂಡಲ ನಿಯೋಗದ ಯೋಜನೆಯಂತೆ ಕಾಂಗ್ರೆಸ್ ನಡೆಯಲು ಸಿದ್ಧವೆಂದು ಪಂ|| ನೆಹರು ಮುಸ್ಸೋರಿಯಲ್ಲಿ ನ್ಯೂಸ್ ಕ್ರಾನಿಕಲ್ ಪತ್ರಿಕಾ ಬಾತ್ಮೀದಾರರಿಗೆ ತಿಳಿಸಿರುವರೆಂದು ಹೇಳಲಾಗಿದೆ.

ಲೇಕ್ ಸಕ್ಸೆಸ್ ಮೇ 26 — ಸಂಯುಕ್ತ ರಾಷ್ಟ್ರ ಜನರಲ್ ಅಸೆಂಬ್ಲಿ ಕಮಿಟಿಗೆ ಭಾರತೀಯರಾದ ಶ್ರೀ ಸೆನ್ನರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

ನವದೆಹಲಿ ಮೆ 26 — ಗಾಂಧೀಜಿಯವರು ಇಂದಿನ ಪ್ರಾರ್ಥನಾನಂತರದ ಭಾಷಣದಲ್ಲಿ ಮಂತ್ರಿಮಂಡಲ ಯೋಜನೆಯಂತೆ ಬಿಟಿಷ್ ಭಾರತವನ್ನು ಬಿಡಬೇಕೆಂದು ಒತ್ತಾಯವಾಗಿ ತಿಳಿಸಿದ್ದಾರೆ.

ಮಾರ್ಗೇಟ್ ಮೆ 27 — ಲೇಬರ್ ಪಾರ್ಟಿ ಸಮ್ಮೇಳನದಲ್ಲಿ ಅಟ್ಲಿಯವರೂ ಮಾಡಿದ ಭಾಷಣದಲ್ಲಿ ಲೇಬರ್ ಸರಕಾರವು ಭಾರತ ಮತ್ತು ಕಾಲನಿಗಳ ಅಗಾಧ ಸಮಸ್ಯೆ ಪರಿಹರಿಸಲು ಪ್ರಯತ್ನಿಸುತ್ತಿರುವುದಾಗಿ ತಿಳಿಸಿದರು ತನಗೆ ಬಿಸಿಂವರ ಮೇಲೆ ಪೂರ್ಣ ಸಂದಿಕೆಯಿದೆಯೆಂದೂ ನುಡಿದರು.

ಲಾಹೋರ್ ಮೇ 26 — ಕಾಶ್ಮೀರದಲ್ಲಿರುವ ರಾಜಕೀಯ ಖೈದಿಗಳೆಲ್ಲಾ ಕ್ಷೀಪ್ರದಲ್ಲೇ ಬಿಡುಗಡೆಯಾಗುವ ಸಂಭವವಿದೆಯೆಂದು ಶ್ರೀ ಕೃಪಾಲಿನಿಯವರು ತಿಳಿಸಿದ್ದಾರೆ.

ಲಾಹೋರು ಮೇ 26 — ಕಳೆದ ನಾಲ್ಕೈದು ದಿನಗಳಿಂದ ವಾಟಿಯಾಲಾ ಸುತ್ತ ಮುತ್ತ ಗುಡ್ಡ ಪ್ರದೇಶದಲ್ಲಿ ಅಗ್ನಿ ಉತ್ಪಾದನವಾಗಿ ಅದೇ ಇರುವುದನ್ನು ನೋಡಿದರೆ ಪಾಟಿಯಾಲಾ ರಾಜರ ಬೇಸಿಗೆ ರಾಜಧಾನಿ ಚೈಲಾ ಊರೂರೇ ಅಗ್ನಿಯ ಪಾಲಾದೀತೆಂಬ ಶಂಕೆ ಹೆಚ್ಚಿದೆ

ಅಹಮದಾಬಾದ್ ಮೇ 26 — ರಾಜಕೀಯ ಸ್ವಾತಂತ್ರ್ಯ ಬಂದೊಡನೆ ಕಾಂಗ್ರೆಸ್ಸನ್ನು ರದ್ದು ಗೊಳಿಸಬೇಕಾಗಿಲ್ಲವೆಂದೂ ನಂತರ ಸಾಮಾಜಿಕ ಸ್ವಾತಂತ್ರ್ಯ ಸಾಧಿಸಲು ಕಾಂಗ್ರೆಸ್ ಕೆಲಸ ಮಾಡಬೇಕಾಗಿದೆಯೆಂದೂ ಶಂಕರದೇವರು ಹೇಳಿದ್ದಾರೆ.

ವಿಜಯನಗರ ಮೆ 21 — ಆಂಧ್ರ ದೇಶದ ಸುಪ್ರಸಿದ್ಧ ಶ್ರೀ ಸಿಂಹಾಚಲ ದೇವಾಲಯಕ್ಕೆ ನಿನ್ನೆ ಹರಿಜನ ಪ್ರವೇಶವಾಯಿತು. ವಿಜಯನಗರದ ರಾಜರು 3000 ಹರಿಜನರೊಡನೆ ಈ ಕಾರ್ಯ ನಡೆಸಿದರು.

ಕಲ್ಕತ್ತಾ ಮೆ 27 — ಈ ದಿನ ಬೆಳಿಗೆ ಪೋಲೀಸರ ಮೇಲೆ 2 ಬಾಂಬು ಬಿದ್ದವು.

ವಾಷಿಂಗ್‌ಟನ್ ಮೆ 22 — ಯುದ್ಧ ವಿಪತ್ತಿಗೆ ಗುರಿಯಾದ ಯೂರೋಪಿ ಮತ್ತು ಏಷ್ಯಾ ಖಂಡಗಳ ದೇಶಗಳಿಗೆ ಪರಿಹಾರಕ್ಕೆ 35 ಕೋಟಿ ಡಾಲರ್ ಸಹಾಯ ನಿರ್ಣಯಿಸಲಾಗಿದೆ.

ಬ್ರಿಟೀಷು ಆಕ್ರಮಿತ ಜರ್ಮನೀ ಭಾಗದಲ್ಲಿಯ ಜರ್ಮನಿ ಪತ್ರಿಕೆಗಳನ್ನು ರಷ್ಯಾಕ್ಕೆ ವ್ಯತಿರೇಕವಾಗಿ ಪ್ರಚಾರ ಮಾಡಲಿಕ್ಕೆ ಬ್ರಿಟೀಷು ಅಧಿಕಾರಿಗಳು ಆಜ್ಞಾಪಿಸಿರುವಂತೆ ರಷ್ಯನ್ ಆಕ್ರಮಿತ ಜರ್ಮನಿಯಲ್ಲಿಯ ಒಂದು ಪತ್ರಿಕೆಯು ತಿಳಿಸಿದೆ.

ಮದರಾಸು ಮೇ 27 — ಗಿರಣಿ ಬಟ್ಟೆ ಮೇಲೆ ಕಂಟ್ರೋಲನ್ನು ತೆಗೆಯುವ ಸರಕಾರ ಯೋಚಿಸುತ್ತಿಲ್ಲವೆಂದು ಹೇಳಲಾಗಿದೆ

ನವದೆಹಲಿ ಮೆ 28 — ದಕ್ಷಿಣ ಭಾರತದಿಂದ ಸೈನ್ಯ ಪಡೆಯು ಪಂಜಾಬಿಗೆ ಅಲ್ಲಿಯ ಶಾಂತಿ ಪರಿಪಾಲನೆಯಲ್ಲಿ ಸಹಾಯ ಮಾಡುವುದಕ್ಕಾಗಿ ಹೊಟ್ಟೆಯೆಂದು ಹೇಳಲಾಗಿದೆ.

ಕಲ್ಕತ್ತಾ ಮೇ 27 — ಗಲಭೆಯಲ್ಲಿ 5 ಮಂದಿ ಸತ್ತು 23 ಮಂದಿ ಗಾಯಗೊಂಡಿರುವುದೆಂದೂ ಪೋಲೀಸರು 106 ಮಂದಿ ಹಸ್ತಗಿರಿ ಮಾಡಿರುವರೆಂದು ಹೇಳಲಾಗಿದೆ.

ಕರಾಚಿ ಮೇ 27 — ಪಾಕೀಸ್ಥಾನ ರಾಜ್ಯಾಂಗ ಸಭೆಯು ಅಧ್ಯಕ್ಷತೆಯನ್ನು ಮಿ|| ಜಿನ್ನರು ವಹಿಸುವರೆಂದು ಲೀಗಿನ ಕಾರ್ಯಕಾರಿ ಸಮಿತಿ ಸದಸ್ಯರಾದ ಮಿ|| ಖುರೋರವರು ಹೇಳಿದ್ದಾರೆ.

ಕರಾಚಿ — ಮೆ 27 — 4 ಮಂದಿ ಒಂದು ಟ್ಯಾಕ್ಸಿಯನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡು ಸ್ವಲ್ಪ ದೂರ ಹೋದನಂತರ ಡ್ರೈವರಿಗೆ ಗುಂಡುಹೊಡೆದು ಅವನಲ್ಲಿದ್ದ ಎಲ್ಲಾ ಹಣಕಾಸನ್ನು ಜಿನ್ನದ ಗುಂಡಿಗಳನ್ನು ತೆಗೆದು ಕೊಂಡು ಅವನನ್ನು ಅಚೆಗೆ ಎಸೆದು ಟ್ಯಾಕ್ಸಿಯೊಡನೆ ಪರಾರಿಯಾಗಿರುವರು. ಇವರ ಪತ್ತೆಗಾಗಿ ಪೋಲೀಸರು ಏರ್ಮಾನ ಪಡೆ ಕಳಿಸಿದ್ದಾರೆ.

ಲಂಡನ್ ಮೆ 28 — ಜೂನ್ 2 ರಲ್ಲಿ ಏರ್ಪಡಿಸಲಾಗಿರುವ ಭಾರತ ಮುಖಂಡರ ಸಮ್ಮೇಳನದಲ್ಲಿ ಭಾಗವಹಿಸಲು ವೈಸರಾಯರು ಡೆಲ್ಲಿಗೆ ನಾಳೆ ಹೊರಡುವರು ಅವರ ಯೋಜನೆ ನಡೆಸಲು ಸಂಪೂರ್ಣಾಧಿಕಾರವನ್ನು ಅವರಿಗೆ ಕೊಡಲಾಗಿದೆಯೆಂದು ಹೇಳಲಾಗಿದೆ.

ಅಮೃತಸರ ಮೆ 28 — ಇಲ್ಲಿಯ ಒಂದು ಕಡೆಯಲ್ಲಿ ನಿವಾಸಿಗಳು ಭಾರಿ ಹೊಡೆದಾಟ ನಡೆಸಿ ಗುಂಡು ಮತ್ತು ಕಲ್ಲುಗಳನ್ನು ಧಾರಾಳವಾಗಿ ಉಪಯೋಗಿಸಿದರು.

ಲಂಡನ್ ಮೆ 28 — ಗಾಂಧೀಜಿಯವರು ಕಳೆದುಕೊಂಡ ಗಡಿಯಾರಕ್ಕೆ ಪ್ರತಿಯಾಗಿ ಒಂದು ಬ್ರಿಟಿಷ್ ಕಂಪೆನಿಯು ಅವರಿಗೆ ಒಂದು ಗಡಿಯಾರವನ್ನು ಕಳುಹಿಸಿರುವದು.

ಪಾಟ್ನಾ ಮೆ 28 — ಗಾಂಧಿಜಿ ಸ್ನರ ವಿರುದ್ಧ ದಂಗೆ ನಡೆಸಲೂ ಮತ್ತು ಬ್ರಿಟಿಷರ ವಿರುದ್ಧ ಕ್ರಾಂತಿ ನಡೆಸಲು ಕಾಕಾ ಕ್ಷಾರ ನಾಯಕ ಅಲಾಮ್ ಮಂತ್ರಿಕ್ಕರು ಹೇಳಿಕೆ ಹೊರಡಿಸಿದ್ದಾರೆ

ನವದೆಹಲಿ ಮೇ 29 — ಭಾರತದಲ್ಲಿ ಅಧಿಕಾರ ವರ್ಗಾಯಿಸುವ ಮಂತ್ರಿ ಮಂಡಲದಿಂದ ಒಪ್ಪಿತವಾದ ವೈಸರಾಯರ ಯೋಜನೆಯು ಭಾರತ ಮುಖಂಡರಿಗೆ ತಿಳಿಸಲಾಗಿದೆ.

ಬೆಂಗಳೂರು ಮೇ 29 — ಅಸ್ಸಾಂ ಜ್ಯಿಯಲ್ಲಿ ಬಂದ ತೊಗರಬೆಳೆ ವಿಷಯದ ನಿಲುವಳಿ ಸೂಚನೆಯು ವಿರೋಧವಿಲ್ಲದೆ ಪಾಸ್ಸಾಯಿತು

ನವದೆಹಲಿ ಮೆ 29 — ಇಡೀ ದೇಶವೇ ಬೆಂಕಿ ಜ್ವಾಲೆಗೆ ತುತ್ತಾದರೂ ಬಲಾತ್ಕಾರದಿಂದ ಪಾಕಿಸ್ಥಾನ ಕೊಡಲು ನಾವು ಒಪ್ಪುವುದಿಲ್ಲ. ಶಾಂತಿ ಮತ್ತು ಸೌಹಾರ್ದ ವಾತಾವರಣದಲ್ಲಿ ಜರ್ಜೆ ನಡೆಸಿದಲ್ಲಿ ಮುಸ್ಲಿಂ ಲೀಗು ಲಾಭ ಹೊಂದಬಹುದು ಅನ್ಯಥಾ ಅಲ್ಲ ಎಂದು ಗಾಂಧೀಜೀ ಈ ದಿನದ ಪ್ರಾರ್ಥನಾ ಸಭೆಯಲ್ಲಿ ತಿಳಿಸಿದರು

ನವದೆಹಲಿ ಮೇ 29 — ಜೂನ್ 2 ಕ್ಕೆ ಮುಂಚೆ ವೈಸರಾಯರು ಪ್ರಮುಖ ಭಾರತ ಮುಖಂಡರೊಡನೆ ಮಾತುಕತೆ ನಡೆಸಬಹುದೆಂದು ಹೇಳಲಾಗಿದೆ.

— —

ದೇವಾಲಯ ಪ್ರವೇಶ

ಮದರಾಸು ಮೆ 28 — ದೇವಾಲಯ ಪ್ರವೇಶ ಕಾನೂನು ವಾಂಕ್ಯದಲ್ಲಿ ಜೂ 2 ರಿಂದ ಜಾರಿಗೆ ಬರುವುದೆಂದು ಮದಂತಸ ಸರಕಾರ ಪ್ರಕಟಿಸಿದೆ. ತ್ರಾ|| 2 ರ ನಂತರ ಹರಿಜನರನ್ನು ದೇವಾಲಯ ಪ್ರವೇಶಕ್ಕೆ ಅಡ್ಡ ಕಟ್ಟದಲ್ಲಿ ಅದು ತಕ್ಷೀರಾಗುವುದು, ತಿರುಪತಿ ದೇವಾಲಯಕ್ಕೆ ಹರಿಜನ ಪ್ರವೇಶ ತಡೆದು ಹೈಕೋರ್ಟಿನವರು ಕೊಟ್ಟಿರುವ ಹುಕುಮ್ಮನ್ನು ಈ ಹೊಸ ಕಾನೂನಿನ್ನು ಅನುಸರಿಸಿ ವಾಪಸ್ ತೆಗೆದುಕೊಳ್ಳಲು ಸರಕಾರವು ಅರ್ಜಿ ಹಾಕುವುದೆಂದು ಹೇಳಲಾಗಿದೆ.

ಲಂಡನ್ ಕಡೆ ನಿಮ್ಮ ದೃಷ್ಟಿ ಏಕೆ ? ಭಾರತ ಸ್ವಾತಂತ್ರ್ಯ ನಿಮ್ಮ ಹಸ್ತದಲ್ಲೇ ಇದೆ !

ನವದೆಹಲಿ, ಮೆ 25 — ಈ ದಿನಸದ ಪ್ರಾರ್ಥನಾ ಸಭೆಯಲ್ಲಿ. ಗಾಂಧೀಜಿ ಇತ್ತ ಭಾಷಣವಲ್ಲಿ ' ಪ್ರತಿಯೊಬ್ಬನೂ ಲಾರ್ಡ್ ಮೌಂಟ್ ಬ್ಯಾಟನ್ನರು ಏನು ತರಬಹುದು ಎಂದು ಲಂಡನ್ ಕಡೆ ನೋಡುತ್ತಿದ್ದಾನೆ. ಪ್ರಜೆಗಳು ತಮ್ಮ ಸ್ವಂತ ಭವಿಷ್ಯಕ್ಕಾಗಿ ಲಂಡನ್ ಕಡೆ ನೋಡುವುದು ವಿಷಾದ. ಸ್ವಾತಂತ್ರ್ಯವು ನಿಮ್ಮ ಹಸ್ತದಲ್ಲೇ ಇದೆ ' ಎಂದರು

ಭಾರತಸೇನೆ ವಿಭಜನೆ ಅನಿವಾರ್ಯ

ನವದೆಹಲಿ ಮೆ 25— ವಿಭಜಿಸಲ್ಪಟ್ಟ ಭಾರತವು ಭಾರತ ಶಸ್ತ್ರಾಸ್ತ್ರ ಸಡಿಗಳ ವಿಭಜನೆಯನ್ನು ಹೊಂದಿರಲೇಬೇಕಾದುದು ಅನಿವಾರ್ಯ. ವಿಭಜನೆ ನಡೆಯುವುದು ಯಾವ ಭಾಗದ ಆಸ್ತಿಯಿಂದಲೂ ಅಲ್ಲ ಎಂದು ಕೇಂದ್ರ ಸರಕಾರದ ರಕ್ಷಣಾ ಮಂತ್ರಿ ಬಲದೇವ್ ಸಿಂಗರು ಹೇಳಿದ್ದಾರೆ.

ಕಲ್ಕತ್ತೆಯ ಪರಿಸ್ಥಿತಿ

108 ಡಿಗ್ರಿಗಳ ಬಿಸಲು, ಕಾಲರ್ ಮುಸ್ಕರಗಳು, ಲೀಗು ಮಂತ್ರಿವರ್ಗ, ಭಾರತ ದೇಶದಲ್ಲಿಯೂ ಇತರ ರಾಷ್ಟ್ರಗಳಿಗಿಂತ ಅಹಾರ ಪದಾರ್ಥಗಳ ಬಲೆಗಳು ಹೆಚ್ಚು, ಮನುಷ್ಯರ ಪ್ರಾಣವು ಅಗ್ಗ ಇದು ಭಾರತ ದೇಶದ ಪಟ್ಟಣಗಳೆಲ್ಲಕ್ಕಿಂತ ದೊಡ್ಡ ಪಟ್ಟಣವಾದ ಕಲ್ಕತ್ತಾ ನಗರದ ಪರಿಸ್ಥಿತಿ.

ಬಹಿರಂಗ ಬೀದಿಗಳಲ್ಲಿ ನಡೆಯುತ್ತಿದ್ದರೆ ಯಾವಾಗ ಕತ್ತಿಯು ಬೆನ್ನು ಮೇಲೆ ಬೀಳುವದೋ ಎಂಬ ಭಯ, ಪ್ರತಿಯೊಬ್ಬರ ಮನಸ್ಸಿನಲ್ಲಿ ಪಾಕಿಸ್ಥಾನ ಹಿಂದೂಸ್ಥಾನ ಆಫೀಸ್ರಾಯವು ಏರ್ಪಟ್ಟಿದೆ. ಸಿಕ್ಕ ಟಾಕ್ಸೀ ಡ್ರೈವರರು ಮುಸ್ಲಿಂರು ಹೆಚ್ಚಾಗಿರುವ ಸ್ಥಳಕ್ಕೆ ಬರುವುದಿಲ್ಲವೆನ್ನುತ್ತಾನೆ. ಪಠಾಣನು ಹಿಂದೂಗಳು ಮೆಜಾರಿಟಿಯಾಗಿರುವ ಬಾಲೀ ಗಂಜಿಗೆ ತನ್ನ ಗಾಡಿಯನ್ನು ಬಾಡಿಗೆಗೆ ಹೊಡೆಯುವದಿಲ್ಲವೆನ್ನುತ್ತಾನೆ.

ಬಾಲ ಸೇವಕಿ

ಎಸ್. ಎಸ್. ಕೃಷ್ಣ ಜ್ಯೂವೆಲರ್ಸ್ ಪಿಕ್ಚರ್ ನಿನರು ತಯಾರಿಸಲಿರುವ 'ಬಾಲ ಸೇವಕಿ' ಚಿತ್ರದ ಆರಂಭೋತ್ಸವದ ಅಧ್ಯಕ್ಷತೆಯನ್ನು ವಹಿಸುವರು.

ತಾ॥ 2-6-47 ॥ ಶ್ರೀ॥ ನಂ. 38

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಪ್ರಬೋಧದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ– ಗುಂಡ್ಮಿ ಮಹಾಜನಭಟ್ಟ, ವೇದಾಂತಶಿರೋಮಣಿ ವೇಗಾರತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಸನ್ಮಾರ್ಗ

೦ — ೦

(26.5-47 ರಂದ ಮುಂದುವರಿದುದು)

ನಾರದ — ನಿರಾಶನಾಗಬೇಡ ದಸ್ಯುರಾಜ ! ಭಗವದ್ಭಕ್ತರ ಬಳಿಗೆ ಬಂದು ನೀನು ಬರಿಗೈಯಿಂದ ಹಿಂದಿರುಗಲಾಕೆ ಅಗಲಿ ಹೇಳುಸೋಡೋಣ, ಅಲ್ಲೆ ರಷ್ಟು ಮರಗಳು ತೋರುತ್ತಿವೆಯಲ್ಲಾ, ಅವುಗಳಲ್ಲಿ ನಿನಗೆ ನಿನ ಬೇಟೆಯನ್ನು ಹೊಂಚು ಹಾಕಲಿಕ್ಕೆ ಉಪಯುಕ್ತವಾದದು ಯಾವ ಮರ ?

ವಾಲ — (ಕೈ ತೋರಿಸಿ) ಆ ಮರ !

ನಾರದ — ಸರಿ, ಸರಿ ಇದೇ ಆ ಮರ ! ಎಂಬ ಶಬ್ದವನ್ನು ತಿರುಗಿ ತಿರುಗಿ ಹೇಳುತ್ತಿರು, ಈ ಕ್ರೂರ ಕರ್ಮಗಳನ್ನು ಬಿಟ್ಟು ಬಿಡು, ರಕ್ತದಿಂದ ಬಣ್ಣಗೊಂಡ ಈ ಕಯ್ಯಗಳನ್ನು ಭಗವಂತನ ಚರಣಾಮೃತದಿಂದ ತೊಳೆದಿಟ್ಟುಕೊ. ನಿನ್ನ ಉದ್ಧಾರ ನಿಶ್ಚಿತವಾಗಿದೆ ದಸ್ಯುರಾಜ !

ವಾಲ — ದಸ್ಯುರಾಜನಲ್ಲ, ವಾಲ ಎನ್ನಿರಿ ದೇವ !

ನಾರದ — ಒಳ್ಳೇದು, ವಾಲಾ ನಾನು ಹೋಗುವೆ, ನಂದಿಯು ನಿನಗೆ ಸಹಾಯ ಮಾಡುವಳು. ನಿನಗೆ ಕಲ್ಯಾಣವಾಗಲಿ.

ವಾಲ — ದೇವ ಸ್ವಲ್ಪ ನಿಲ್ಲಿರಿ, ಬಿಸ್ಮೋ ನಿಮ್ಮನ್ನು ಪೂಜಿಸಿಕೊಳ್ಳುವೆ.

ನಾರದ — ಈಗ ಇಲ್ಲ, ಬೇರೆಂದಾದರೂ (ನೋಗುವನು)

ಪಂ॥ ನೆಹರುರವರಿಗೆ

ಶ್ರೀ ಜಗದ್ಗುರುಗಳ ತಂತಿ

ಸ್ವಂ. ಸು ತಂತಿ] ತೀರ್ಥಹಳ್ಳಿ ಮೆ 11

ಶಿವಮೊಗ್ಗಾದಲ್ಲಿ ಮೈಸೂರು ಸಂಸ್ಥಾನ ಪಂಡಿತ ಸಮ್ಮೇಳನ, ಅಖಿಲ ಕರ್ನಾಟಕ ಜ್ಯೋತಿಷ್ಯ ಸಮ್ಮೇಳನ, ಅಗಮ ಸಮ್ಮೇಳನ, ಅಖಿಲ ಕರ್ನಾಟಕ ಸನಾತನ ಧರ್ಮ ಸಮ್ಮೇಳನಗಳನ್ನು ಮುಗಿಸಿಕೊಂಡು ಶ್ರೀ ದ್ವಾರಕಾ ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾರಾಜರವರು ನಿನ್ನೆ ಮುಳಬಾಗಲಿಗೆ ದಯಮಾಡಿಸಿದರು. ಜೈಲಿನಿಂದ ಶ್ರೀ ಕೃಪಾಚಾರ್ಯ ಸ್ವಾಮಿ ಮತ್ತು ಇತರ ಸನಾತನಿ ಮುಖಂಡರನ್ನು ಬಿಡುಗಡೆ ಮಾಡಿದ್ದಕ್ಕಾಗಿ ಶ್ರೀ ಜಗದ್ಗುರುಗಳು ಪಂ॥ ನೆಹರು ಮತ್ತು ಸಂದಾರ ಪಟೇಲರನ್ನು ಅಭಿನಂದಿಸಿ ತಂತೀ ಕಳುಹಿಸಿದರು. ಅಲ್ಲದೆ ಕೂಡಲೇ ಧರ್ಮ ಯುದ್ಧದ 5 ಕೋರಿಕೆಗೆ ಸಮ್ಮತಿಸಬೇಕೆಂದು ಒತ್ತಾಯ ಪಡಿಸಿರುವರು. ಶ್ರೀ ಜಗದ್ಗುರುಗಳು ಶ್ರೀ ಕರಪಾತ್ರಿಸ್ವಾಮಿಗಳನ್ನು ಅಭಿನಂದಿಸಿ, ತಂತೀ ಕಳುಹಿಸಿ ಧರ್ಮ ಯುದ್ಧದಲ್ಲಿ ಪೂರ್ಣ ಜಯ ದೊರೆಯಲೆಂದು ಕೋರಿರುವರು.

ವಾಲ — ಆ ಮರ, ಆ ಮರ. ನಂದಾ ಇದೇ ನನ್ನನ್ನು ಉದ್ಧಾರ ಮಾಡುವುದಲ್ಲವೇ ?.

ನಂದಾ — ಹೌದಣ್ಣಾ ! ನಡೆ ಸ್ವಲ್ಪ ವಿಶ್ರಮಿಸಿಕೋ.

ವಾಲ — ಇಲ್ಲ ನಂದಾ ! ಇನ್ನು ವಿಶ್ರಾಮ ವಿಲ್ಲ. ಆ ಮರ ಆ ಮರ ಆ ಮ ರಾಮ ರಾಮ (ಕುಣಿಯುವನು) (ತೆರೆಬೀಳುವುದು).

— ನೋಟ ೨ —

(ಮಹರ್ಷಿ ವಾಲ್ಮೀಕಿಯ ಆಶ್ರಮ) ವಾಲ್ಮೀಕಿಯು ಧ್ಯಾನಸ್ಥನಾಗಿ ಕುಳಿತಿರುವನು. ನಂದಿಯು ಹೂವುಗಳನ್ನು ತಂದು ಕೊಟ್ಟು ಹೊರಟು ಹೋಗುವಳು.)

ವಾಲ್ಮೀಕಿ — (ಕಣ್ಣೆರೆದು) ರಾಮ ರಾಮ ರಾಮ ಭಗವಾ ! ನಿನ್ನೀ ಪತಿತಪಾವನನಾದ ನಾಮವು ಎಷ್ಟು ಸುಂದರವಾಗಿದೆ. ಕೊಲೆಗಡುಕನನ್ನು ಮನುಷ್ಯನನ್ನಾಗಿ ಮಾಡುವ. ನರಕದಿಂದ ದಿಳೆದು ಮೋಕ್ಷದ ದರ್ಶನಮಾಡಿಸುವ, ಹಿಂದು ಮುಂದಾಗಿ ಸೇವಿಸಿದರೂ ನೇರವಾದ ಫಲವನ್ನು ಕೊಡುವ ಈ ನಾಮವು ಎಷ್ಟು ಅದ್ಭುತವಾದುದು ? ರಾಮ ರಾಮ ರಾಮ.

ನಂದಿ — (ಪ್ರವೇಶಿಸಿ) ಅಣ್ಣಾ ನಾನೇ ತುಲಸೀಪತ್ರಗಳನ್ನು ತಂದಿರುವೆ. ನಡೆ ಪೂಜೆ ಮಾಡು, ನೋಡು, ನಾನಿಂದು ಭಗವಂತನನ್ನು ಎಷ್ಟು ಅಂದವಾಗಿ ಶೃಂಗರಿಸಿರುವೆ ?

ವಾಲ್ಮೀಕಿ — .....

ನಂದಿ — ಅಣ್ಣಾ ನಮ್ಮನಿರುವೆಯೇಕೆ ? ನಡೆ.

ವಾಲ್ಮೀಕಿ — ನಂದಾ, ನಾನಿಂದು ಇಡೀ ಪ್ರಪಂಚದ ಶೃಂಗಾರವನ್ನು ನೋಡುತ್ತಿರುವೆ. ಅಖಿಲ ವಿಶ್ವದಲ್ಲಿ ಹರಡಿರುವ ಸುಖವ ಶಾಂತಿಯನ್ನು ಪೂರ್ತ ಮೊದಲು ಅನುಭವಿಸುತ್ತಿರುವೆ.

ನಂದಿ — ನಾನು ನಿನ್ನ ಮಾತನ್ನರಿಯುಲಿಲ್ಲ ಅಣ್ಣಾ !

ವಾಲ್ಮೀಕಿ — ಅರಿಯುಲಿಲ್ಲವೇ ? ನೋಡು (ಮುಂದೊಂದು ವೃಕ್ಷದ ಕಡೆಗೆ ಕೈ ತೋರಿಸಿ) ಈ ಪಕ್ಷಿ ವಿಷ್ಣುವು ಎಷ್ಟು ಸಂದಂವಾಗಿ ಕ್ರೀಡಿಸುತ್ತಿದೆ ಶೀತಲ ಮಾರುತವು ಅವುಗಳ ಹೃದಯದನ್ನು ಅನುದಿಸುತ್ತಾ ಬೀಸುತ್ತದೆ. ಚಿಕ್ಕ ರಂಬೆಯು ವೇಲೆ ತೂಗಾಡುತ್ತಾ ಅವು ಎಷ್ಟು ಅಂದವಾಗಿ ತೋರುತ್ತಿವೆ ; ಜಗತ್ತಿನ ಇಡೊಂದು ರೂಪ ಸಂದಾ ! (ಇಷ್ಟರಲ್ಲಿಯೇ ಒಂದು ಬಾಣವು ಬಂದು ಒಂದು ಪಕ್ಷಿಗೆ ತಗಲಿ ಅದು ಕೂಡಲೇ ಕೆಳಕ್ಕೆ ಬೀಳುವುದು)

ನಂದಿ — ಅಯ್ಯೋ ! ಇದಾವ ಕೊಲೆಗಾರನ ಕಾರ್ಯ ?- [ಸಶೇಷ

ಶಿವಮೊಗ್ಗಾದಲ್ಲಿ ಸಮ್ಮೇಳನಗಳು

ಸ್ವಂ. ಸು. ತಂತಿ] ಶಿವಮೊಗ್ಗ ಮೇ 27

ತಾ॥ 25 ರ ಬೆಳಿಗ್ಗೆ ಪಂಸ್ಥಾನದ ಪಂ ತರ ಸಮ್ಮೇಳನವು ಶ್ರೀ ದ್ವಾರಕಾ ಗದ್ಗುರುಗಳವರ ಘನ ಅಧ್ಯಕ್ಷತೆಯ ಸಡೆಯಿತು. ಅಧ್ಯಕ್ಷರು ಅವರ ಬಿ ಾರದಿಂದ ಸಮ್ಮೇಳನದ ಸ್ಥಳಕ್ಕೆ ಭಾ ಮೆಂವಣಿಗೆಯಿಂದ ರಾಜ ಬೀದಿಗಳ ಕರೆತಂದ್ದಲ್ಪಟ್ಟರು. ಸಂಸ್ಥಾನದ ಹಮಂತ್ರಿ ಶ್ರೀ ಶೇಷಾದ್ರಿಗಳವರು ಸ ್ಮೇಳನ ಪ್ರಾರಂಭೋತ್ಸವವನ್ನು ನೆರ ೀರಿಸಿದರು. ಭಾರತದ ಎಲ್ಲಾ ಕಡೆ ಳಿಂದ ಬಂದಿದ್ದ ಸಂದೇಶಗಳು ಓದಲಾ ುತು. ಅಧ್ಯಕ್ಷರು ಭಾರತ ಸಂಸ್ಕೃತಿ ಸತೆ ಮುಂತಾದುವನ್ನು ವಿವರಿಸಿ, ಪಂ ತರ ಕರ್ತವ್ಯ ವಿಚಾರನಸ್ಥಡಕಮಾಡಿ ಮೋಘ ಭಾಷಣ ಮಾಡಿದರು. ಪ್ರ ುಖ ಪಂಡಿತರನೇಕರ ಭಾಷಣಾನಂತ ಕೆಲವು ಠರಾವ್ಗಳು ಮಂಜೂರಾದ ಂತರ ಸಮ್ಮೇಳನ ಪರಿಸಮಾಪ್ತಿಯಾ ುತು.

ಅಖಿಲ ಕರ್ನಾಟಕ ಜ್ಯೋತಿಷ್ಯ ಸ ್ಮೇಳನವು ವೈಭವವಾಗಿ ಶ್ರೀವರ್ಮಾ ೀನಿವಾಸಮ್ಯುಂಗಾರ್ಯರ ಅಧ್ಯಕ್ಷತೆಯ ನಡೆಯಿತು. ಅಧ್ಯಕ್ಷರ ಮತ್ತು ಹ ವು ಪ್ರಖ್ಯಾತ ಜ್ಯೋತಿಷ್ಯರ ಭಾಷಣ ಾದ ನಂತರ ಶ್ರೀ. ದ್ವಾರಕಾ ಜಗ ರುಗಳು ಬಹಳ ಸ್ವಾರಸ್ಯವಾದ ಭಾ ಣ ಮಾಡಿದರು. ಕೆಲ ಮುಖ್ಯ ಸ ಸ್ಯೆಗಳನ್ನು ಪರಿಹರಿಸಿ ಹರಿ ಕೀರ್ತನ ಂದಿಗೆ ಸಮ್ಮೇಳನ ಪರಿಸಮಾಪ್ತವಾ ತು.

ಈ ದಿನ ಅಗಮ ಸಮ್ಮೇಳನವು ಶ್ರೀ ್ವಾರಕಾ ಜಗದ್ಗುರುಗಳ ಅಧ್ಯಕ್ಷತೆಯ ನಡೆಯುವುದು.

ಾತನ ಧರ್ಮ ಸಮ್ಮೇಳನ

ಸು. ತಂತಿ] ಶಿವಮೊಗ್ಗ ಮೆ 30

ತಾ॥ 27 ರಲ್ಲಿ ಆಗಮ ತಾ॥ 28 ರ ಸನಾತನ ಧರ್ಮ ಸಮ್ಮೇಳನಗಳು ದ್ವಾರಕಾ ಜಗದ್ಗುರು ಶ್ರೀ ಶಂಕ ಾರ್ಯ ಮಹಾರಾಜರವರ ಘನ ಅ ್ಷತೆಯಲ್ಲಿ ಯಶಸ್ವಿಯಾಗಿ ನಡೆದವು ತಸ ಹಿಂದೂ ಧರ್ಮ ಸಂಬಂಧ ವ ಠಾಧಿಪತಿಗಳ ಅನುಮತಿಯಿಲ್ಲ ಎನೊಂದು ಶಾಸನವನ್ನು ಯಾವ ಸ

ಗ್ರೈಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬೆಲಪಡಿಸುವ ಸಾಮರ್ಥ್ಯ. ಗ್ರೈಪ್ ಸಿರಪ್ ರುಚಿ ಸಿಹಿಯಾಗಿಯೂ ಮತ್ತು ಆಹ್ಲಾದಕರವಾದುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಪರಿಚಿತ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅಕ್ಷಮ್ಯವಲ್ಲ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.,

Malleswaram P. O. Bangalore

ಮಹಾಜನತೆ ಕೋವಿಕೆಯಂತೆ ಪ್ರತಿದಿನ ೩-೩೦ ಕ್ಕೆ ಮ್ಯಾಟ್ನಿ

... ಪೂರ್ಣಚಂದ್ರ ಮೈಸೂರು ...

ತಾ|| 1-6-47 ರಿಂದ ಕಿಕ್ಕಿದ ನೇ 5 ವಾರ

ನಾವು ಇಬ್ಬರು

(ತಮಿಳು)

ತಾರಾಗಣ : * ಟಿ.ಆರ್. ಮಹಾಲಿಂಗಂ * ಬಿ.ಆರ್. ಪಂತಲು
* ಸಾರಂಗಪಾಣಿ * ಟಿ. ಯಂ. ಜಯಲಕ್ಷ್ಮಿ * ಬೇಬಿ ಕಮಲ

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಆರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದ್ದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಕೃತ್ರಿಮ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ.

ವಲ್ಲಭದಾಸ್ ತೇಜ್ ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜೆ. ಟಿ. ಮಹಲಾಸು.

BANGALORE RACES 1947.

ಬೆಂಗಳೂರು ರೇಸಸ್ ೧೯೪೭

ಜೂನ್ 4, 7, 11, 14, 18, 21 ಮತ್ತು 25 ರಲ್ಲಿ

ಬುಕ್ ಮೇಕರ್ಸ್ ಮತ್ತು ಟೋಟಲೈಜೇಟರ್ಸ್

ರೂ. 2 ಸ್ವೀಪ್ ಮತ್ತು ರೂ. 5 ಟ್ರೈಬಲ್ ಈವೆಂಟ್

1 st ಟೋಟ್ ರೂ. 10. 11 nd ಟೋಟ್ ರೂ 5,

ಪ್ರವೇಶ — ಪೆವಿಲಿಯನ್ ಕರಗತಿ ....ಪುರುಷರು—ರೂ. 6 ಒಂದು ದಿನಕ್ಕೆ

....ಸ್ತ್ರೀಯರು—ರೂ. 4 "

ಎಲ್ಲಾ ಕೆಳಗಿನ ಕರಗತಿ....ಪುರುಷರು ರೂ. 2 "

(ಕುಭ) ಸ್ತ್ರೀಯರು

ಉಡುಪುಗಳನ್ನು ಅತಿ ಜೋಕ್ಕಾಗಿ ಒಗೆದು

— ಕುಭ್ರಮಾಡುವ ಸಾಧನ —

ಮೈಸೂರು ಸಾಬೂನನ್ನು ಉಪಯೋಗಿಸುವ ಹೊಸರತ್ನ, ಆಶ್ಚರ್ಯಕರವಾದಷ್ಟು ನಮ್ಮನ್ನಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನಾ ತಿಳಿಯಲಾವರು;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

At Opera

7 ನೇ ವಾರ

ಟಿ ಎಸ್. ಬಾಲಯ್ಯ,
ತವಳುಣಿದೇವಿ, ಮೋಲಿ,
ರಾಮುಚುದ್ರ ನಟಿಸಿರುವ

ರಾಜಕುಮಾರಿ

(ತಮಿಳು)

Edited, Printed and Published by M. S Krishna Rao at the Satyavadi Press Chamraj Agrahar, Mysore.

For Quality Printing
L. N. Press
Srirampuri, MYSORE.